<u>ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು</u>
<u>ದಿಃ 22-01-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ವಿಬಿ ವಕೀಲರವರಿಂದಃ-</u>

ಎ ಶೆಡ್ಯೂಲ್ ಸ್ವತ್ತು ಪಂಚಾಯಿತಿ ರಸ್ತೆಯಲ್ಲ ಎಂದರೆ ಸರಿಯಲ್ಲ. ಸದರಿಯು ಸಾರ್ವಜನಿಕರ ರಸ್ತೆಯಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯ ಆಜು ಬಾಜುದಾರರು ಮಾತ್ರ ಓಡಾಡುತ್ತಾರೆಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಆಜು ಬಾಜುದಾರರು ತಮ್ಮ ಸ್ವಂತ ಅನುಕೂಲಕ್ಕಾಗಿ ಬಿಟ್ಟುಕೊಂಡಿದ್ದಾರೆಂದರೆ ಸರಿಯಲ್ಲ. ಊರಿನ ಮುಖ್ಯ ರಸ್ತೆಯು ಗೆಜ್ಜಲಗೆರೆಯಿಂದ ಕನ್ನಲಿ ಎಂಬ ಊರಿಗೆ ಹಾದು ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಗೆ ಊರಿನ ಎಲ್ಲಾ ಪಂಚಾಯಿತಿ ರಸ್ತೆಗಳ ಸಂಪರ್ಕ ಇದೆ ಎಂದರೆ ಸರಿ.

ಬಿ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ 6 ಅಡಿ ಓಣಿ ಇದೆ ಎಂದರೆ ಸರಿಯಲ್ಲ. ಸದರಿ ಓಣಿಯ ಪಶ್ಚಿಮಕ್ಕೆ ವೀಣಾ ರವರ ನಿವೇಶನ ಇದೆ ಎಂದರೆ ಸರಿಯಲ್ಲ. ಸದರಿ ವೀಣಾ ರವರ ವಾಸದ ಮನೆ ಬೇರೆ ಕಡೆ ಇದೆ ಎಂದರೆ ಸರಿ. ವಾಸದ ಮನೆ ಮತ್ತು ಖಾಲಿ ನಿವೇಶನದ ಪೂರ್ವಕ್ಕೆ ನನ್ನ ಕಾಪೌಂಡ್ ಇದೆ ಎಂದರೆ ಸರಿ. ಕಾಪೌಂಡ್ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ. ನಮ್ಮ ಮನೆ ಮತತ್ತು ನಿವೇಶನದ ಕಾಪೌಂಡ್ ನ ಎದುರುಗಡೆ ಇರುವ ರಸ್ತೆ ಎದುರುಗಡೆ ಸುಕನ್ಯಾ ಕೋಂ ಚಂದ್ರು, ರತ್ನ ಕೋಂ ನಾಗರಾಜು, ಎಸ್ ಸಿ ರಾಜು ಬಿನ್ ಚನ್ನಯ್ಯ ರವರ ಮನೆ ಮತ್ತು ನಿವೇಶನಗಳು ಇವೆ. ಸದರಿ ಎಸ್ ಸಿ ರಾಜು ಎಂಬುವವರು ಪ್ರತಿವಾದಿಯ ಚಿಕ್ಕಪ್ಪ ಎಂದರೆ ಸರಿ. ಸದರಿ ರಾಜು ರವರು ವಾಸಿಸುವ ಮನೆಯ ಪಿತ್ರಾರ್ಜಿತವಾಗಿದೆ ಎಂದರೆ ಸರಿ. ಸದರಿ ಮನೆ ನಿರ್ಮಿಸಿ ಸುಮಾರು 60-70 ವರ್ಷವಾಗಿದೆ ಎಂದರೆ ಸಾಕ್ಷಿ 50 ವರ್ಷವಾಗಿರಬಹುದು ಎನ್ನುತ್ತಾರೆ. ಸದರಿ ರಾಜು ರವರ ಮನೆಯ ಉತ್ತರಕ್ಕೆ ಪ್ರತಿವಾದಿಯವರ ಪಿತ್ರಾರ್ಜಿತ ಸ್ವತ್ತು ಇದೆ ಎಂದರೆ ಸಾಕ್ಷಿ ಪ್ರತಿವಾದಿಯ ತಂದೆಯ ಮನೆ ಇದೆ ಎನ್ನುತ್ತಾರೆ. ರಾಜು ರವರು ಮತ್ತು ಪ್ರತಿವಾದಿ ತಂದೆಯ ಮನೆ ಪಿತ್ರಾರ್ಜಿತವಾಗಿ ಬಂದಿದೆ ಎಂದರೆ ಸರಿ. ಸದರಿಯು ಒಂದೇ ಮನೆಯ ಎರಡು ಭಾಗಗಳು ಎಂದರೆ ಸರಿ. ಸದರಿ ಪ್ರತಿವಾದಿಯ ತಂದೆಯ ಭಾಗದ ಮನೆಯ ಉತ್ತರಕ್ಕೆ ಬಿ ಶೆಡ್ಯೂಲ್ ಸ್ವತ್ತು ಇದೆ ಎಂದರೆ ಸರಿ. ಪ್ರಸುತ್ತ ನಮ್ಮ ಮನೆಯ ಮುಂದೆ 18 ಅಡಿ ರಸ್ತೆ ಇದೆ. ಸದರಿ 18 ಅಡಿ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಂಚಾಯಿತಿಯಿಂದ ರಸ್ತೆಯಾದ್ದಲ್ಲಿ ಆ ಬಗ್ಗೆ ಸಭಾ ನಡಾವಳಿಯಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಪಂಚಾಯಿತಿಯವರು ಜಲ್ಲಿ ಮತ್ತು ಟಾರು ನ್ನು ಹಾಕಿ ರಸ್ತೆ ಮಾಡಿದ್ದಾರೆ. ಪಂಚಾಯಿತಿಯವರು ಇತ್ತೀಚೆಗೆ ಸೀಮೆಂಟ್ ರಸ್ತೆ ಮಾಡುತ್ತಾರೆ ಎಂದರೆ ನಾನು ತಿಳಿದುಕೊಂಡಿಲ್ಲ. ಊರಿನಲ್ಲಿ ಸೀಮೆಂಟ್ ರಸ್ತೆಗಳು ಇದೆ. ಎ ಶೆಡ್ಯೂಲ್ ಸ್ವತ್ತಿನ ರಸ್ತೆಯನ್ನು

ಪಂಚಾಯಿತಿಯವರು ಮಾಡಿದ್ದು ಸಾರ್ವಜನಿಕರು ಬಳಸುತ್ತಾರೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತು ವ್ಯವಸಾಯಕ್ಕೆ ಯೋಗ್ಯವಾಗಿರದೇ ನಿವೇಶನ ಆಗುವ ಸ್ವತ್ತಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲೆಯಲ್ಲಿ ಜಮೀನಾಗಿದೆ ಎನ್ನುತ್ತಾರೆ. ಬಿ ಶೆಡ್ಯೂಲ್ ಸ್ವತ್ತು ಮತ್ತು ಸಿ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿ ಮತ್ತು ವೀಣಾ ಎಂಬುವವರ ಪೂರ್ವಿಕರು ಸಾರ್ವಜನಿಕರ ಓಡಾಟಕ್ಕೆ ಬಿಟ್ಟುಕೊಟ್ಟಿದ್ದರು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಪೂರ್ವ ಭಾಗದಲ್ಲಿ ಹಿಂದೆ ಹಳ್ಳ ಇದ್ದು ಅದನ್ನು ಪಂಚಾಯಿತಿಯವರು ಈಗ ಚರಂಡಿ ಮಾಡಿದ್ದಾರೆಂದರೆ ಸರಿ. ನಾನು ಹೇಳುವಂತೆ ಎ ಶೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತು ಪ್ರತಿವಾದಿಗೆ ಸೇರಿದೆ ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸಾಕ್ಷಿ ಸದರಿಯು ಪ್ರತಿವಾದಿಗೆ ಸೇರಿಲ್ಲ ಎನ್ನುತ್ತಾರೆ. ಸಿ ಶೆಡ್ಯೂಲ್ ಸ್ವತ್ತು ಬಿ ಶೆಡ್ಯೂಲ್ ಸ್ವತ್ತಿನ ಒಂದು ಭಾಗವಾಗಿದ್ದು ರಸ್ತೆಯ ಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಯಾವುದೇ ಸಾರ್ವಜನಿಕರ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಸಾರ್ವಜನಿಕ ರಸ್ತೆಯಿದ್ದಲ್ಲಿ ಪಂಚಾಯಿತಿಯಲ್ಲಿ ದಾಖಲಾತಿ ಇರುತ್ತದೆ ಎಂದರೆ ಸರಿಯಲ್ಲ. ಕಚ್ಚಾನಕ್ಷೆಯು ವಸ್ತುಸ್ಥಿತಿಗೆ ಅನುಗುಣವಾಗಿರದೇ ಸುಳ್ಳಾಗಿದೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ 6 ಅಡಿ ಓಣಿ ಇದ್ದರೂ ಕೂಡ 18 ಅಡಿ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮನೆಯನ್ನು ಸುಮಾರು 50 ವರ್ಷದ ಹಿಂದೆ ನಿರ್ಮಿಸಿದ್ದು, ಕಾಪೌಂಡ್ ನ್ನು 30 ವರ್ಷದ ಹಿಂದೆ ನಿರ್ಮಿಸಿದ್ದೇವೆ. ಮನೆ ಕಟ್ಟಲು ಅಥವಾ ಕಾಪೌಂಡ್ ನಿರ್ಮಿಸಲು ಲೈಸೆನ್ಸ್ ಪಡೆದಿಲ್ಲ. ಕಾಪೌಂಡ್ ನಿರ್ಮಿಸುವ ವೇಳೆಯಲ್ಲಿ 3 ಅಡಿ ಮಾತ್ರ ರಸ್ತೆಗೆ ಬಿಟ್ಟಿದ್ದೇವೆಂದರೆ ಸರಿಯಲ್ಲ. ಪಂಚಾಯಿತಿಯವರು ಎ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಸೇತುವೆ ಅಥವಾ ರಸ್ತೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿ ಹಾಜರುಪಡಿಸಿಲ್ಲ.

ಎ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರಸ್ತೆ ಇಲ್ಲ ಎಂದು ಪ್ರತಿವಾದಿಯ ತಂದೆಗೆ ಪಂಚಾಯಿತಿಯವರು ಹಿಂಬರಹ ನೀಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಯಾವುದೇ ರಸ್ತೆಯ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ರ ಪೋಟೋದಂತೆ ಬಲಭಾಗದಲ್ಲಿ ನನ್ನ ಮನೆ ಮತ್ತು ಖಾಲಿ ಜಾಗದ ಕಾಪೌಂಡ್ ಕಾಣುತ್ತಿದ್ದು ಅದರಂತೆ ಎಡಭಾಗದಲ್ಲಿ ಪ್ರತಿವಾದಿಯರ ತಂದೆ ಮನೆ ಮತ್ತು ಬಿ ಶೆಡ್ಯೂಲ್ ಮನೆ ಇದೆ ಎಂದರೆ ಸರಿ. ಸದರಿ ಪೋಟೋದಲ್ಲಿ ಪ್ರತಿವಾದಿಯರು ಕಾಪೌಂಡ್ ನಿರ್ಮಿಸಲು ತೆಗೆದಿರುವ ಅಡಿಪಾಯವು ತಮ್ಮ ಪಿತ್ರಾರ್ಜಿತ ಮನೆಯ ನೇರಕ್ಕೆ ಇದೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯ ತಂದೆಯ ಮನೆ ಮತ್ತು ನಮ್ಮ ಮನೆಯ ನಡುವೆ ಇರುವ ರಸ್ತೆಯು 18 ಅಡಿ ಇರದೇ 6 ಅಡಿ ಇದೆ ಎಂದರೆ ಸರಿಯಲ್ಲ. ನಿಪಿ-10 ರಂತೆ ಒಂದು ಲೈಟ್ ಕಂಬ ಮತ್ತು ಸೇತುವೆ ಇದೆ ಎಂದರೆ ಸಾಕ್ಷಿ ಸೇತುವೆ

ಕಾಣುತ್ತಿಲ್ಲ ಎನ್ನುತ್ತಾರೆ. ನಿಪಿ-10 ರ ಪೋಟೋದಂತೆ ಲೈಟ್ ಕಂಬ ಮತ್ತು ಕಾಪೌಂಡ್ ಗೆ ತೆಗೆದಿರುವ ಅಡಿಪಾಯದ ನಡುವೆ 6 ಅಡಿ ಅಂತರವಿದೆ ಎಂದರೆ ಸಾಕ್ಷಿ ಜಾಸ್ತಿ ಇದೆ ಎನ್ನುತ್ತಾರೆ. ಸದರಿ ಲೈಟ್ ಕಂಬದಿಂದ ಪೂರ್ವಕ್ಕೆ ಎಷ್ಟು ಅಡಿ ರಸ್ತೆಯಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪೋಟೋದಂತೆ ಅಂದಾಜಿನಂತೆ ಎಷ್ಟು ಅಡಿ ರಸ್ತೆ ಇದೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-7 ರಂತೆ ಚಪ್ಪಡಿಯನ್ನು ನಿರ್ಮಿಸಿ ಸೇತುವೆ ಮಾಡಲಾಗಿದೆ ಎಂದರೆ ಸಾಕ್ಷಿ ಚಪ್ಪಡಿಯನ್ನು ಹಾಕಿದ್ದು ಸೇತುವೆ ಮಾಡಿಲ್ಲ ಎನ್ನುತ್ತಾರೆ. ಅದರ ಕೆಳಭಾಗ ಚರಂಡಿ ಹೋಗುತ್ತದೆ ಎಂದರೆ ಸರಿ. ಸದರಿ ಪೋಟೋದಲ್ಲಿ ಕಾಣುವಂತೆ ನಮ್ಮ ಕಾಪೌಂಡ್ ನ ಉತ್ತರಕ್ಕೆ ಇರುವುದು ವೀಣಾ ರವರ ಜಾಗ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ನಾಡ ಹೆಂಚಿನ ಮನೆ ನಿರ್ಮಿಸುವಾಗ ಸೂರನ್ನು ಬಿಡುತ್ತಾರೆಂದರೆ ಸರಿ. ಸದರಿ ಸೂರನ್ನು ಜನರು ತಮ್ಮ ಜಾಗದ ಒಳಗೆ ಬಿಟ್ಟುಕೊಳ್ಳುತ್ತಾರೆಂದರೆ ಸರಿಯಲ್ಲ. ಹೇಗಾದರೂ ಮಾಡಿ ಪ್ರತಿವಾದಿಯವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಹೂಡಿ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು